**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಟಿ.ಎನ್.ಜವರಾಯಿಗೌಡ ಇವರ ಶೂನ್ಯ ವೇಳೆಯ ಪ್ರಶ್ನೆಗೆ ಉತ್ತರಿಸುವ ಬಗ್ಗೆ**

**ವಿಷಯ:**

ಸಾಮಾಜಿಕ ಹೊಣೆಗಾರಿಕೆ ಯೋಜನೆಯಡಿ (ಸಿ.ಎಸ್.ಆರ್ ಅನುದಾನದಡಿ) ಬೆಂಗಳೂರು ನಗರ ಜಿಲ್ಲೆ ಯಶವಂತಪುರ ವಿಧಾನ ಸಭಾ ಕ್ಷೇತ್ರಕ್ಕೆ ಸೇರಿದ ಸರ್ಕಾರಿ ಶಾಲೆಗಳನ್ನು ತುರ್ತಾಗಿ ದುರಸ್ತಿಪಡಿಸುವ ಬಗ್ಗೆ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ದಿನಾಂಕ:28-07-2025 ರಂದು ಪ್ರಕಟವಾಗಿರುವಂತೆ, ಶಿಕ್ಷಣ ಇಲಾಖೆಯು ಸಾಮಾಜಿಕ ಹೊಣೆಗಾರಿಕೆ ಯೋಜನೆಯಡಿ ಅಂದರೆ ಸಿ.ಎಸ್.ಆರ್. ಅನುದಾನದಡಿ 150 ಸರ್ಕಾರಿ ಶಾಲೆಗಳಿಗೆ ರೂ.300 ಕೋಟಿ ವೆಚ್ಚದಲ್ಲಿ ದುರಸ್ತಿಯ ಕಾಯಕಲ್ಪ ನೀಡಲು ನಿರ್ಧರಿಸಲಾಗಿದೆ ಎಂದು ತಿಳಿಸಲಾಗಿದೆ. ರಾಜ್ಯದಲ್ಲಿ ಸುಮಾರು 46,757 ಸರ್ಕಾರಿ ಶಾಲೆಗಳಿದ್ದು, ತುರ್ತಾಗಿ 22,000 ಶಾಲೆಗಳ ದುರಸ್ತಿಯಾಗಬೇಕಾಗಿದೆ ಎಂದು ವರದಿಯಾಗಿದೆ. ಖಾಸಗಿ ಕಂಪನಿಯಾದ ಇನ್ಫೋಸಿಸ್ ಒಂದೆ ಸುಮಾರು 250 ಕೋಟಿ ರೂಗಳ ದೇಣಿಗೆ ನೀಡುತ್ತಿದೆ. ಬೆಂಗಳೂರಿನ ಇನ್ನು ಹಲವಾರು ಕಂಪನಿಗಳು ಸುಮಾರು 100 ಕೋಟಿ ರೂ ಗಳಕ್ಕಿಂತಲೂ ಹೆಚ್ಚಿಗೆ ದೇಣಿಗೆ ನೀಡುತ್ತಿವೆ. ಬೆಂಗಳೂರು ನಗರ ಜಿಲ್ಲೆಯ, ಯಶವಂತಪುರ ವಿಧಾನ ಸಭಾ ಕ್ಷೇತ್ರಕ್ಕೆ ಹೊಂದಿಕೊಂಡಂತೆ ಅನೇಕ ಸರ್ಕಾರಿ ಶಾಲೆಗಳು ಗ್ರಾಮಾಂತರ ಪ್ರದೇಶಗಳಲ್ಲಿವೆ. ಅವುಗಳಲ್ಲಿ ಅತ್ಯಂತ ಅಪಾಯದ ಅಂಚಿನಲ್ಲಿರುವ ಶಾಲೆಯ ಕಟ್ಟಡಗಳನ್ನು ದುರಸ್ತಿಪಡಿಸಬೇಕಾಗಿದೆ. ಕೆಲವು ಶಾಲೆಯ ಕಟ್ಟಡಗಳನ್ನು ಕೆಡವಿ ಹೊಸ ಕಟ್ಟಡಗಳನ್ನು ನಿರ್ಮಿಸಬೇಕಾಗಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ, ಬೆಂಗಳೂರು ಉತ್ತರ ಶೈಕ್ಷಣಿಕ ವಲಯ-1ರಲ್ಲಿ ಬರುವ ಬ್ಯಾಡರಹಳ್ಳಿ(ಹೊಸದಾಗಿ ಕಟ್ಟಡ ನಿರ್ಮಿಸಬೇಕಾಗಿರುವುದು) ಆದ್ರಹಳ್ಳಿ, ತಿಪ್ಪೇನಹಳ್ಳಿ, ಮತ್ತು ಹೊಸಹಳ್ಳಿಯ ಅಂಗನವಾಡಿ ಕಟ್ಟಡ ಹಾಗೂ ಬೆಂಗಳೂರು ದಕ್ಷಿಣ ಶೈಕ್ಷಣಿಕ ವಲಯ-1ರ ವ್ಯಾಪ್ತಿಗೆ ಬರುವ ಗಂಗಪನಹಳ್ಳಿ, ಚಿಕ್ಕಲ್ಲೂರು ದಾಖಲೆ ಎಸ್.ಸಿ.ಕಾಲೋನಿ, ತಾವರೆಕೆರೆ ಗ್ರಾಮ, ಗಣಪತಿಹಳ್ಳಿ ಜನತಾ ಕಾಲೋನಿ, ತಾತಗುಣಿ, ರಾಚನಮಡು, ಗಾಣಕಲ್ಲು ಚಿಕೇಗೌಡನಪಾಳ್ಯ, ನಾಗೇಗೌಡನಪಾಳ್ಯ, ತಿಗಳರಪಾಳ್ಯ, ಚನ್ನನಾಯಕನಪಾಳ್ಯ, ಮತ್ತು ದೊಡ್ಡಬಿದರಕಲ್ಲು ಹೀಗೆ ಈ ಹಳ್ಳಿಗಳಲ್ಲಿರುವ ಸರ್ಕಾರಿ ಶಾಲೆಗಳ ಕಟ್ಟಡಗಳನ್ನು ತುರ್ತಾಗಿ ದುರಸ್ತಿ/ನಿರ್ಮಾಣ ಮಾಡಬೇಕಾಗಿರುವುದರಿಂದ, ಬೆಂಗಳೂರು ನಗರದಲ್ಲಿರುವ ಖಾಸಗಿ ಕಂಪನಿಯವರು ನೀಡಿರುವ ಸಿ.ಎಸ್.ಆರ್.ಅನುದಾನದಲ್ಲಿ ಮತ್ತು ಸರ್ಕಾರದ ಶಿಕ್ಷಣ ಇಲಾಖೆಯ ಅನುದಾನದಲ್ಲಿ ಈ ಶಾಲೆಗಳ ಕಟ್ಟಡಗಳ ದುರಸ್ತಿ/ನಿರ್ಮಾಣ ಮಾಡಿ. ಆ ಶಾಲೆಗಳಿಗೆ ತುರ್ತಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಲು ಶೂನ್ಯ ವೇಳೆಯಲ್ಲಿ ಮಾನ್ಯ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇವೆ

**ಉತ್ತರ:**

ಸಿ.ಎಸ್ ಆರ್ ನಿಧಿಯ ಕಂಪನಿಗಳು ಶಾಲೆಗಳನ್ನು ಆಯ್ಕೆ ಮಾಡಿಕೊಂಡು, ಆ ಶಾಲೆಗಳಿಗೆ ಅವಶ್ಯಕತೆ ಇರುವ ಭೌತಿಕ ಹಾಗೂ ಶೈಕ್ಷಣಿಕ ಸೌಲಭ್ಯಗಳ ಬಗ್ಗೆ ವಿಶ್ಲೇಷಿಸಿ ಕ್ರಿಯಾ ಯೋಜನೆಯನ್ನು ತಯಾರಿಸಿ, ಅಗತ್ಯವಿರುವ ಬಜೆಟ್ ನಿರ್ಧರಿಸಿ ತಾವೇ ಸ್ವತಃ ಕಟ್ಟಡ ನಿರ್ಮಾಣ ಹಾಗೂ ಇತರ

ಸೌಲಭ್ಯಗಳನ್ನು ನೀಡುವಂತೆ ಕ್ರಮಕೈಗೊಳ್ಳಲಾಗಿದೆ.

ಜಿಲ್ಲಾ ಹಂತದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ PMU ಸ್ಥಾಪಿಸಿ, ಆಯ್ಕೆಯಾದ ಶಾಲೆಗಳಲ್ಲಿರುವ ಕೊರತೆಗಳ ಪಟ್ಟಿ ಮಾಡಿ, ಶಾಲೆಗಳ ಅಗತ್ಯತೆಗನುಗುಣವಾಗಿ ಭೌತಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಗಾಗಿ ಕ್ರಿಯಾ ಯೋಜನೆ ಸಿದ್ಧಪಡಿಸಿ CSR ನೀಡುವ ಕಂಪನಿಗಳನ್ನು ಆಹ್ವಾನಿಸಿ ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಕ್ರಮ ಕೈಗೊಳ್ಳುವಂತೆ ಮಾಡಲಾಗಿದೆ.

ಆಯುಕ್ತಾಲಯದ ಯೋಜನೆ ಶಾಖೆಯ ಪತ್ರ ಸಂಖ್ಯೆ:-ಯೋ4/ಶೂನ್ಯವೇಳೆ/2025-26 ದಿ:-12.08.2025 ರ ಮಾಹಿತಿಯಂತೆ ಒಟ್ಟು 17 ಶಾಲೆಗಳ ಪೈಕಿ ಈ ಕೆಳಕಂಡ ಶಾಲೆಗಳಿಗೆ 2024-25ನೇ ಸಾಲಿನ ರಾಜ್ಯವಲಯ ಮುಂದುವರೆದ ಯೋಜನೆಯಡಿ ಸರ್ಕಾರಿ ಶಾಲಾ ಕೊಠಡಿಗಳ ದುರಸ್ತಿ ಕಾಮಗಾರಿಗಳಿಗೆ ಅನುದಾನ ಮಂಜೂರಾಗಿರುತ್ತದೆ.

ರೂ.ಲಕ್ಷಗಳಲ್ಲಿ

| ವಿಧಾನಸಭಾ ಕ್ಷೇತ್ರದ ಹೆಸರು | ಡೈಸ್ ಸಂಖ್ಯೆ | ಶಾಲೆಯ ಹೆಸರು | ಮಂಜೂರಾದ ಕೊಠಡಿಗಳ ಸಂಖ್ಯೆ | ಮಂಜೂರಾದ ಅನುದಾನ | ಬಿಡುಗಡೆಯಾದ ಅನುದಾನ |
|---|---|---|---|---|---|
| Yeshwanthpura | 29280201701 | GMPS BYADARAHALLI | 7 | 4.00 | 4.00 |
| Yeshwanthpura | 29280201802 | GMPS ANDRAHALLI | 10 | 4.50 | 4.50 |

**ಸಂಖ್ಯೆ: ಇಪಿ 245 ಯೋಸಕ 2025**

**(ಎಸ್. ಮಧು ಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**